**ಓ.ಎಸ್ ನಂಃ 263/2011** **ಪಿ.ಡಬ್ಲ್ಯೂ-4**

**<u>ದಿನಾಂಕಃ 23-01-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು. ಮುಂದುರಿದ ಪಾಟೀ ಸವಾಲುಃ ಪ್ರತಿವಾದಿ 1, ಮತ್ತು 3 ರವರ ಪರ ಶ್ರೀ. ಆರ್.ವಿ.ಎನ್.ಕೆ. ವಕೀಲರಿಂದಃ</u>**

ನನ್ನ ತಂದೆ ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳು ಮತ್ತು ಅವರ ಸಾಕ್ಷಿ ವಿಚಾರಣೆ ಸರಿಯಾಗಿರುತ್ತವೆ. ನನ್ನ ತಂದೆ ಈ ದಾವೆಯಲ್ಲಿ ಮ.ಅ.ಸಂಖ್ಯೆ 3 ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಮ.ಅ.ಸಂಖ್ಯೆ 3 ರಲ್ಲಿ ಸರ್ವೆ ನಂ.34/1 ರಲ್ಲಿ 35 ಗುಂಟೆ ಜಮೀನು 2 ನೇ ಪ್ರತಿವಾದಿ ತಂದೆ ಪ್ರಾಣೇಶಚಾರ್ಯರವರಿಗೆ ಸೇರಿದ ಆಸ್ತಿ ಎಂದು ಹೇಳಿ ಬರೆಸಿರುತ್ತಾರೆ ಎಂದರೆ ಸರಿ. ದಿಃ- 29-08-2011 ರಂದು ನನ್ನ ತಂದೆ ಈ ದಾವೆಯಲ್ಲಿ ಮ.ಅ.ಸಂಖ್ಯೆ 3 ಸಲ್ಲಿಸುವಾಗ ದಾವಾ ಐಟಂ ನಂ.3, 5 ನೇ ಪ್ರತಿವಾದಿ ಹೆಸರಿಗೆ ಖಾತೆ ಮತ್ತು ಪಹಣಿ ನನ್ನ ತಂದೆಗೆ ತಿಳಿದಿತ್ತು ಎಂದರೆ ಸರಿಯಲ್ಲ. ದಿಃ- 29-08-2011 ರಂದು ನನ್ನ ತಂದೆ ಅಥವಾ ನಾನು ಮ.ಅ.ಸಂಖ್ಯೆ3 ಸಲ್ಲಿಸುವಾಗ ದಾವಾ ಐಟಂ.3 ರ ಋಣಭಾರ ಪ್ರಮಾಣ ಪತ್ರ ಪರಿಶೀಲಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಬರುತ್ತಿರಲಿಲ್ಲ ಎಂದು ಹೇಳುತ್ತಾರೆ.

ದಿಃ- 29-09-2010 ರಂದು ನಿಪಿ-22 ನನ್ನ ತಂದೆಗೆ ನಾನೇ ನೀಡಿರುತ್ತೇನೆ. ನನ್ನ ತಂದೆಗೆ ಕೆಲವು ದಾಖಲೆಗಳನ್ನು ನಾನು ನೀಡಿರುತ್ತೇನೆ.

**ಪ್ರಶ್ನೆಃ-** 2011 ರಿಂದ 2024 ರವರೆಗೆ ನಿಮ್ಮ ತಂದೆಯಾಗಲೀ ಅಥವಾ ನೀವಾಗಲೀ ಈ ದಾವೆಯಲ್ಲಿ 5 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲು ಪ್ರಯತ್ನಿಸಿದ್ದಿರಾ?
**ಉತ್ತರಃ-** 5 ನೇ ಪ್ರತಿವಾದಿ ದಾಖಲೆಗಳು ಸೃಷ್ಠಿ ಮಾಡಿರುವುದು ನಮಗೆ ಗೊತ್ತಿರಲಿಲ್ಲ.

5 ನೇ ಪ್ರತಿವಾದಿ ಬಾಬುರವರ ತಂದೆ ನನಗೆ ಮಾವನಾಗಬೇಕು. ನನಗೆ ಮತ್ತು 5 ನೇ ಪ್ರತಿವಾದಿಯರ ತಂದೆಗೆ ಸಂಬಂಧ ಸರಿ ಇರುತ್ತದೆ. 5 ನೇ ಪ್ರತಿವಾದಿಗೆ ಯಾವಾಗ ಕ್ರಯ ಪತ್ರ ಆಗಿರುತ್ತದೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ಅದು ಸೃಷ್ಠಿಪಡಿಸಿದ ದಾಖಲೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿ ಮಾನ್ಯ ಉಚ್ಚ

ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದಾಗ 2022-23 ರಲ್ಲಿ ನನಗೆ ಅವರು ಕ್ರಯಪತ್ರ ಮಾಡಿಕೊಂಡಿರುವ ವಿಚಾರ ತಿಳಿದು ಬಂದಿರುತ್ತದೆ. ದಿ 29-08-2011 ರಿಂದ 2022 ರವರೆಗೆ 5 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾವೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದರಿಂದ ಮತ್ತು 5 ನೇ ಪ್ರತಿವಾದಿ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದರಿಂದ ನಾವು 5 ನೇ ಪ್ರತಿವಾದಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

2007 ರಿಂದ ಈ ದಾವೆ ಇತ್ಯರ್ಥವಾಗುವರೆಗೆ 5 ನೇ ಪ್ರತಿವಾದಿಗೆ ಸಂಬಂದಿಸಿದ ದಾಖಲೆಗಳು ನಾವು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎನ್ನುವ ಪ್ರಶ್ನೆಗೇ ಸಾಕ್ಷಿ 5 ನೇ ಪ್ರತಿವಾದಿ ದಾಖಲೆ ಸೃಷ್ಠಿಸಿರುವ ವಿಚಾರ ನಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನಿಪಿ-17 ರಂತೆ ಕಾಲಂ ನಂ.9 ರಲ್ಲಿ ಪ್ರಾಣೇಶಚಾರ್ಯ ರವರ ಹೆಸರಿಗೆ ಪಹಣಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಅದು 1976 ರಿಂದ 1981 ರವರೆಗೆ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ-17 ರ ಕಾಲಂ ನಂ.12 ರಲ್ಲಿ ನನ್ನ ತಂದೆ ವೆಂಕಟಪ್ಪನ ಹೆಸರು ನಮೂದಾಗಿರುತ್ತದೆ. ನಿಪಿ-17 ರಲ್ಲಿ ವಾರ ಎಂದು ನಮೂದಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ಹೇಳುತ್ತಾರೆ. ಅದು ತಪ್ಪಾಗಿ ನಮೂದಾಗಿರುವುದು 2007 ರಲ್ಲಿ ನಾವು ಈ ದಾವೆ ಸಲ್ಲಿಸುವಾಗ ತಿಳಿದು ಬಂದಿರುತ್ತದೆ. ನಿಪಿ-17 ರಲ್ಲಿ ವಾರ ಎಂದು ತಪ್ಪಾಗಿ ನಮೂದಾಗಿರುವುದು ಸರಿಪಡಿಸಲು ನನ್ನ ತಂದೆ ಅರ್ಜಿ ನೀಡಿರಬಹುದು ಆದರೆ ನನಗೆ ಗೊತ್ತಿಲ್ಲ. ನಿಪಿ-17 ರಿಂದ 21 ರವರೆಗೆ ಪಹಣಿ ಫತ್ರಿಕೆ ಕಾಲಂ ನಂ.9 ರಂತೆ ಪ್ರಾಣೇಶಚಾರ್ಯ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಪ್ರಾಣೇಶಚಾರ್ಯರವರು 2 ನೇ ಪ್ರತಿವಾದಿ ಶ್ರೀಶಾಂತ ರವರ ತಾತ ಎಂದರೆ ಸರಿ.

ಪ್ರಾಣೇಶಚಾರ್ಯ ಮತ್ತು ತುಳಸಿಬಾಯಿ ಅಣ್ಣ ತಂಗಿ ಆಗಬೇಕು. ನಿಪಿ-17 ರಿಂದ 21 ರಲ್ಲಿ ಪ್ರಾಣೇಶಚಾರ್ಯ ರವರಿಗೆ ಆಸ್ತಿ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ ಎನ್ನುವ ಪ್ರಶ್ನೆಗೇ ಸಾಕ್ಷಿ ಅದು ಯಾವ ರೀತಿ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಿಪಿ-12 ನ್ಯಾಯಾಲಯಕ್ಕೆ ನಾವೇ ಸಲ್ಲಿಸಿರುತ್ತೇವೆ. ಸಾಕ್ಷಿ ಮುಂದುವರಿದು ಅದು ಸೃಷ್ಠಿಪಿಡಿಸಿದ ದಾಖಲೆ ಎಂದು ನ್ಯಾಯಾಲಯಕ್ಕೆ ನೀಡಿರುತ್ತೇವೆ. ನಿಪಿ-12 ತಾಲ್ಲೂಕು ಕಚೇರಿಯಿಂದ ನಾವೇ ತಂದಿರುವ ದಾಖಲೆ ಎಂದರೆ ಸರಿ. ನಿಪಿ-12, 1 ನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷ ಎಂದರೆ ಸರಿ. ನಿಪಿ-12 ರಾಧಾಬಾಯಿ ಸೃಷ್ಠಿ ಮಾಡಿರುತ್ತಾರೆ. 1 ನೇ ಪ್ರತಿವಾದಿ ತಂದೆ ತಾಯಿ ಹೆಸರು ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸುವಾಗ 1 ನೇ ಪ್ರತಿವಾದಿ ವಿಳಾಸ ಕ್ರಯಪತ್ರದಲ್ಲಿ ಇರುವಂತೆ ನೀಡಲಾಗಿರುತ್ತದೆ. ದಿಃ- 24-03-2007 ರಂದು 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ಮಾರಾಟ ಮಾಡಿ ಕ್ರಯ ಪತ್ರ ಬರೆದು ಕೊಟ್ಟಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಠಿಪಡಿಸಿರುವ ದಾಖಲೆ ಎಂದು ಹೇಳುತ್ತಾರೆ.

ಪ್ರಶ್ನೆಃ- ದಿಃ-24-03-2007 ರ ಕ್ರಯಪತ್ರ ಯಾವ ರೀತಿ ಸೃಷ್ಠಿಪಡಿಸಿರುತ್ತಾರೆ?
ಉತ್ತರಃ- ತುಳಸಿಬಾಯಿ ಎನ್ನುವವರಿಗೆ ಮದುವೆ ಆಗಿರಲಿಲ್ಲ. ಅವರ ಸಂಬಂಧಗಳನ್ನು ಸೃಷ್ಠಿ ಮಾಡಿ ಕ್ರಯಪತ್ರ ಸೃಷ್ಠಿಪಡಿಸಿರುತ್ತಾರೆ.

ನನ್ನ ತಂದೆ ವಾದಪತ್ರದಲ್ಲಿ ತುಳಸಿಬಾಯಿ ರವರಿಗೆ ಮದುವೆ ಆಗಿರಲಿಲ್ಲ ಮತ್ತು ಅವರ ಸಂಬಂಧಗಳು ಸೃಷ್ಠಿ ಮಾಡಿ ಕ್ರಯಪತ್ರ ಸೃಷ್ಠಿಪಡಿಸಿರುವ ಬಗ್ಗೆ ಹೇಳಿ ಬರೆಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ಈಗ ಮೇಲೆ ಹೇಳಿದ ವಿಚಾರ ನಾನು ಹೇಳಿ ಬರೆಸಿರುತ್ತೇನೆ. 2007 ರಲ್ಲಿ ದಾವಾ ಐಟಂ ನಂ.1 ರ ಕರಯಪತ್ರ ಸೃಷ್ಠಿ ಮಾಡಿರುವುದು ನಮಗೆ ತಿಳಿದು ಬಂದಿರುತ್ತದೆ. ಅದೇ ಸಮಯದಲ್ಲಿ ನನ್ನ ತಂದೆ ಈ ದಾವೆ ಸಲ್ಲಿಸಿರುತ್ತಾರೆ. ದಾವಾ ಐಟಂ ನಂ.1 ರ ಕ್ರಯ ಪತ್ರ ಆದ ನಂತರ ನನ್ನ ತಂದೆ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬರೆದುಕೊಟ್ಟ ದಾವಾ ಐಟಂ ನಂ.1 ರ ಕ್ರಯಪತ್ರ ಮಾಲೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಅಗಿರುತ್ತದೆ ಎಂದರೆ ಸರಿ. ಈ ದಾವೆ ಸಲ್ಲಿಸುವಾಗ ದಾವಾ ಐಟಂ ನಂ.1 ರ ಕ್ರಯಪತ್ರ ಆಗಿರುವ ವಿಚಾರ ನಮಗೆ ತಿಳಿದಿತ್ತು. 2007 ರಿಂದ 2026 ರವರೆಗೆ ನಾವು ದಿಃ- 24-03-2007 ರ ಕ್ರಯ ಪತ್ರ ರದ್ದುಪಡಿಸುವಂತೆ ಕೇಳಿರುವುದಿಲ್ಲ ಎನ್ನುವ ಪ್ರಶ್ನೆಗೆ

ಸಾಕ್ಷಿ ನಾವು ಈ ದಾವೆ ಸಲ್ಲಿಸಿರುವುದರಿಂದ ಸದರಿ ಕ್ರಯ ಪತ್ರ ಸೃಷ್ಠಿ ಮಾಡಿರುವುದರಿಂದ ಪ್ರಶ್ನೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. 18 ವರ್ಷಗಳಿಂದ ನಾವು ದಿಃ- 24-03-2007 ರ ಕ್ರಯಪತ್ರ ರದ್ದುಪಡಿಸುವಂತೆ ಪ್ರಶ್ನೆ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಠಿ ಮಾಡಿರುವುದರಿಂದ ನಾವು ಪ್ರಶ್ನೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ದಿಃ- 24-03-2007 ರ ಕ್ರಯಪತ್ರ ರದ್ದಿಯಾತಿ ಹೇಳುವಂತೆ ನಮ್ಮ ವಕೀಲರ ಜೊತೆ ಚರ್ಚೆ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಈ ದಾವೆ ಸಲ್ಲಿಸಿರುವುದರಿಂದ ಅವರು ಏನು ಚರ್ಚೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.1 ರ ಮೂಲ  ಮಾಲೀಕರು ತುಳಸಿಬಾಯಿ ಆಗಿರುತ್ತಾರೆ. ತುಳಸಿಬಾಯಿ ರವರಿಗೆ ಮದುವೆ ಆಗಿರುವುದಿಲ್ಲ. ಅವರು ವಾರಸುದಾರರು ಯಾರು ಎಂದರೆ ಅವರ ಸಂಬಂಧದಲ್ಲಿ  ಪ್ರಾಣೇಶಚಾರ್ಯ ಅಣ್ಣನಾಗಬೇಕು. ತುಳಸಿಬಾಯಿ ರವರಿಗೆ 2 ನೇ ಪ್ರತಿವಾದಿ ಶ್ರೀಶಾಂತ ವಾರಸುದಾರರಾಗಿರುತ್ತಾರೆ.

ಪ್ರಶ್ನೆಃ- 2 ನೇ ಪ್ರತಿವಾದಿಗೆ ಈ ದಾವೆಯಲ್ಲಿ ಸೇರಿಸುವಾಗ ತುಳಸಿಬಾಯಿಗೆ ಅವರು ಯಾವ ರೀತಿ ವಾರಸುದಾರರು ಎಂದು ವಾದಪತ್ರದಲ್ಲಿ ಹೇಳಿ ಬರೆಸಿದ್ದಿರಾ?

ಉತ್ತರಃ- 2 ನೇ ಪ್ರತಿವಾದಿ ಶ್ರೀಶಾಂತ ಪ್ರಾಣೇಶಚಾರ್ಯ ರವರ ಮೊಮ್ಮಗ.

ಆ ರೀತಿ ನಾವು ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಡಿ-2 ರಂತೆ ತುಳಸಿಬಾಯಿ ರವರ ಗಂಡ ಬಿ. ಕೃಷ್ಣಮೂರ್ತಿಚಾರ್ಯ ಎಂದು ನಮೂದಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ-2 ರಲ್ಲಿ ಪ್ರಾಣೇಶಚಾರ್ಯ ರವರು ತುಳಸಿಬಾಯಿ ಗಂಡ ಬಿ.ಕೃಷ್ಣಮೂರ್ತಿಚಾರ್ಯ ಎಂದು ಅಸಲು ದಾವೆ ಸಂಖ್ಯೆ 410/1938-39 ಸಲ್ಲಿಸಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ನಿಪಿ-12 ರಂತೆ ತುಳಸಿಬಾಯಿಯಮ್ಮ ರವರ ಮೊಮ್ಮಗಳು

ರಾಧಾ ಬಾಯಿ ಎಂದು ನಮೂದಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಠಿಪಡಿಸಿದ ದಾಖಲೆ ಎಂದು ಹೇಳುತ್ತಾರೆ. ದಾವಾ ಐಟಂ ನಂ.1 ಕ್ಕೆ ತುಳಸಿ ಬಾಯಿ ಮೂಲ ಮಾಲೀಕರು ಆಗಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**

**Sd/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**